ಮುಜರಾಯಿ ದೇವಸ್ಥಾನಗಳಿಗೆ ಕನ್ವೀನರ್‌ಗಳ ನೇಮಕ

748 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಒಬ್ಬರೇ ಕನ್ವಿನರ್‌ಗಳು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಬೆಂಗಳೂರಿನ ಹಲವು ದೇವಸ್ಥಾನಗಳ ಆಡಳಿತ ಮಂಡಳಿಗಳಿಗೆ ಕನ್ವಿನರ್‌ಗಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ, ಒಂದು ದೇವಸ್ಥಾನದ ಆಡಳಿತ ಮಂಡಳಿಯ ಕನ್ವೀನರ್‌ಗಳು ಮತ್ತೊಂದು ಮಂಡಳಿಯ ಕನ್ವೀನರ್‌ಗಳಾವುದನ್ನು ತಪ್ಪಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಹೌದು, ಬಂದಿದೆ.

ಆ) ಈಗಿನ ಅವಧಿ ಮುಗಿದ ನಂತರ ಬದಲಾಯಿಸಲು ಕ್ರಮ ಕೈಗೊಳ್ಳಲಾಗುವುದು.

ಚಿಕ್ಕಮಗಳೂರಿನ ಸಾರಿಗೆ ಸಂಸ್ಥೆಯ ಕ್ಯಾಂಟೀನ್

749 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕ್ಯಾಂಟಿನನ್ನು ಮುಚ್ಚಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ರಾಜ್ಯದ ಉಚ್ಚ ನ್ಯಾಯಾಲಯವು ಈ ಬಗ್ಗೆ ಟೆಂಡರು ಪಡೆದವರಿಗೆ ಕ್ಯಾಂಟೀನ್ ಕೊಡಬೇಕೆಂದು ಆದೇಶ ನೀಡಿರುವುದು ನಿಜವೇ?*

ಇ) *ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು.

ಇ) ರಾಜ್ಯ ಉಚ್ಚ ನ್ಯಾಯಲಯದ ಆದೇಶದ ಮೇರೆಗೆ ಶ್ರೀ ಸದಾಶಿವ ಬಿ. ಹೆಗ್ಗಡೆಯವರಿಗೆ ಉಪಹಾರ ಗೃಹದ ಪರವಾನಗಿ ಪಡೆಯಲು ಕರಾರು ಮಾಡಿಕೊಂಡು ಉಪಹಾರ ಗೃಹವನ್ನು ಕೂಡಲೇ ಪ್ರಾರಂಭಿಸುವಂತೆ ತಿಳಿಸಲಾಗಿದೆ.